**ಮೇ: ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

ಸಿ.ಸಿ ನಂ.1022/2018

ಚಾಸಾ–06 ಪ್ರಾಸಾ–04

| | |
|---|---|
| ಹೆಸರು | ಬಾಬುರಾವ ಬಳೂಲದ |
| ತಾಯಿ ಹೆಸರು | ವೆಂಕಪ್ಪ |
| ವಯಸ್ಸು | 77 ವರ್ಷ |
| ಉದ್ಯೋಗ | ನಿವೃತ್ತ ನೌಕರ |
| ರವಾಸಸ್ಥಳ | ಮುಧೋಳ |

**ದಿನಾಂಕಃ 31-07-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ. ಎ.ಪಿ.ಪಿ., ರವರಿಂದ ಃ**

ದಿನಾಂಕಃ 23.01.2018 ರಂದು ಮಧ್ಯಾಹ್ನ 3.00 ಗಂಟೆ ಸುಮಾರಿಗೆ ನಾನು ನನ್ನ ವೈಯಕ್ತಿಕ ಕೆಲಸದ ನಿಮಿತ್ಯ ಮುಧೋಳ ತಾಲೂಕ ಪಂಚಾಯತ ಹತ್ತಿರ ಇದ್ದಾಗ ಮುಧೋಳ ಠಾಣೆ ಪೋಲಿಸರು ನನಗೆ ಮುಧೋಳ ಠಾಣೆಗೆ ಕರೆದುಕೊಂಡು ಹೋದರು ಅಲ್ಲಿ ಈ ಪ್ರಕರಣದ ಆರೋಪಿತರು ಬಸಲಿಂಗಯ್ಯ ಮಠಪತಿ ಇದ್ದರು ಆತನ ಜೋತೆ ಪ್ರವೀಣ ಮತ್ತು ವಿರಯ್ಯ ಇದ್ದರು ಹಾಗೂ ಅವರು ಹಾಜರುಪಡಿಸಿದ ಮುದ್ದೆ ಮಾಲುಗಳನ್ನು ನನಗೆ ತೋರಿಸಿ ಪಂಚನಾಮೆ ಬರೆದುಕೊಡಲು ಕೇಳಿಕೊಂಡರು ಅದಕ್ಕೆ ನಾನು ಒಪ್ಪಿಕೊಂಡೆ ಆ ಕಾಲಕ್ಕೆ ನನ್ನ ಜೊತೆ ಚಾಸಾ 7 ಸಹ ಹಾಜರಿದ್ದರು. ಆರೋಪಿ ಬಸಲಿಂಗಯ್ಯ ಮಠಪತಿ ಇವರು ನಮಗೆ ತನ್ನ ಜೋತೆ ಬಂದಲ್ಲಿ ತಾನೂ ಮತ್ತು ತನ್ನ ಮಗ ವೀರಯ್ಯ ಮತ್ತು ಅವರ ಗೆಳೆಯರು ಕೂಡಿ ಮಂಡಬಸಪ್ಪನ ಗುಡಿಯ ಹತ್ತಿರ ಇರುವ ಜಮೀನದಲ್ಲಿ ಎರಡು ಮನೆಗಳನ್ನು ಹಾಗೂ ಗುಡಿಯ ಹತ್ತಿರ ಇರುವ ಒಂದು ಕಾಲನಿಯಲ್ಲಿದ್ದ ಇದ್ದ ಒಂದು ಮನೆಯಲ್ಲಿ ಹಾಗೂ ರನ್ನ ಸರ್ಕಲ ಕಡೆ ಇರುವ ಎರಡು ಮನೆಗಳಲ್ಲಿ ಕೀಲಿ ಒಡೆದು ಅಲ್ಲಿ ಇದ್ದ ಬಂಗಾರ ಮತ್ತು ಬೆಳ್ಳಿ ಆಭರಣ ಹಾಗೂ ಹಣವನ್ನು ಕಳ್ಳತನ ಮಾಡಿದ್ದೇವು ಎಂದು ಹಾಗೂ ಬಂಗಾರದ ಆಭರಣಗಳನ್ನು ಯಡಹಳ್ಳಿ ಗ್ರಾಮದಲ್ಲಿರುವ ಮನೆಯಲ್ಲಿ ಒಂದು ಕಡೆ ಮುಚ್ಚಿ ಇಟ್ಟೆದೇವೆ ಎಂದು ಹೇಳಿ ನಾವು ಬಂದರೆ ಅದನ್ನು ನಮಗೆ ತೋರಿಸುವುದಾಗಿ ಹೇಳಿದರು.

ನಂತರ ಆರೋಪಿ, ನಾನು ಚಾಸಾ 5 ಹಾಗೂ ಪೋಲಿಸರು ಕೂಡಿ ಒಂದು ವಾಹನದಲ್ಲಿ ಬಸಲಿಂಗಯ್ಯ ಮಠಪತಿ ಹೇಳಿದಂತೆ ಯಡಹಳ್ಳಿ ಗ್ರಾಮದ ಮೂಲಕ ಹಾಯ್ದು ಬಸ್ಸಸ್ಟಾಂಡ ದಾಟಿದ ನಂತರ ಜೀಪನ್ನು ನಿಲ್ಲಿಸಿ ಆೋರೇಪಿತನ್ನು ತೋರಿಸಿದ ಓಣಿಯ ಸಂದ್ರಿ ರಸ್ತೆ ಹಿಡಿದು ಹೋರಟಾಗ ಒಂದು ಮನೆಯ ಹತ್ತಿರ ನಿಂತು ಆರೋಪಿ ಆ ಮನೆಯಲ್ಲಿ ತಾನು ಬಾಡಿಗೆಗೆ ಇರುತ್ತೇನೆ ಎಂದು ಹೇಳಿದ ನಂತರ ಸದರಿ ಮನೆಯಲ್ಲಿ ಹೋಗಿ ಸ್ವಲ್ಪ ಸಮಯದ ನಂತರ ಮನೆಯಿಂದ ಹೊರಗೆ ಬಂದು ಒಂದು ಬಟ್ಟೆಯಲ್ಲಿ ಆಭರಣಗಳನ್ನು ತಂದು ನಮ್ಮ ಮುಂದೆ

ಹಾಜರುಪಡಿಸಿದ. ಸದರಿ ಆಭರಣಗಳು ಬಂಗಾರದ ನಕಲೇಸ, ಬಂಗಾರದ ಕಡಿ, ಚೈನು, ಉಂಗುರ ಇದ್ದವು ಹೀಗೆ ಒಟ್ಟು 1 ರಿಂದ 8 ಬಂಗಾರದ ಆಭರಣಗಳು ಇದ್ದವು. ಸದರಿ ಆಭರಣಗಳನ್ನು ಒಂದು ಬಟ್ಟೆಯಲ್ಲಿ ಕಟ್ಟಿದ್ದರು. ಸದರಿ ಆಭರಣ ಮತ್ತು ಬಟ್ಟೆಯನ್ನು ನನ್ನ ಮತ್ತು ಚಾಸಾ 5 ರ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 3.15 ರಿಂದ 4.45 ರ ವರೆಗೆ ಜರುಗಿಸಿ ನನ್ನ ಸಹಿ ಮತ್ತು ಪೋಟೋ ತೆಗೆದುಕೊಂಡರು.

ಸದರಿ ಪಂಚನಾಮೆ ಮತ್ತು ಅದರಲ್ಲಿನ ಸಹಿಯನ್ನು ನಿ.ಪಿ. 8 ಮತ್ತು 8 ಎ ಎಂದು ಗುರುತಿಸಲಾಯಿತು. ನಿ.ಪಿ. 8 ರ ಕಾಲಕ್ಕೆ ತೆಗೆದರೆನ್ನಲಾದ ಪೋಟೋಗಳನ್ನು ನಿ.ಪಿ. 9 ಮತ್ತು 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಚಾಸಾ 1 ರ ಪರಿಚಯ ನನಗೆ ಇದೆ. ನಾವಿಬ್ಬರೂ ಒಂದೇ ಏರಿಯಾದಲ್ಲಿ ವಾಸಿಸುತ್ತೇವೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತನನ್ನು ಠಾಣೆಯಲ್ಲಿ ನೋಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸಾಕ್ಷಿ ಯಡಹಳ್ಳಿ ಗ್ರಾಮದಲ್ಲಿ ನೋಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿತರು ನಮಗೆ ಮುದ್ದೇಮಾಲು ತೋರಿಸಿದ್ದನ್ನು ಪೋಲಿಸರು ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡು ಪಂಚನಾಮೆ ಜರುಗಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಾವು ಬೇರೆ ಬೇರೆ ಕಡೆ ಕಳ್ಳತನ ಮಾಡಿದ್ದಾಗಿ ನನ್ನ ಮುಂದೆ ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಾನು ಕದ್ದ ಬಂಗಾರ ಆಭರಣಗಳನ್ನು ನಮಗೆ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ತೋರಿಸಿದ ಸ್ಥಳದಲ್ಲಿ ಮುದ್ದೇಮಾಲನ್ನು ಜಪ್ತು ಪಡಿಸಿಕೊಂಡು ಪಂಚನಾಮೆ ಜರುಗಿಸಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಹಾಜರುಪಡಿಸಿದರು ಎನ್ನಲಾದ ಬಂಗಾರದ ಆಭಾರಣಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯವಿಚಾರಣೆಯಲ್ಲಿನ ವಿಷಯ ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಜರುಗಿಸಿ ಮುದ್ದೇಮಾಲನ್ನು ಜಪ್ತು ಪಡಿಸಿಕೊಂಡು ನಿ.ಪಿ. 8 ಮತ್ತು 9 ರಂತೆ ಪೋಟೋ ಹೊಡೆಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ 1 ನನಗೆ ಪರಿಚಯದವರು ಎಂಬ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ